**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.</u>**

**<u>ವಿಭಜಿತ ಪ್ರಕರಣ ಸಿ ಸಿ ನಂ.947/2025</u>**

**<u>ಫಿರ್ಯಾದಿದಾರರು :-</u>** ಯಡ್ರಾಮಿ ಪೊಲೀಸ್ ಠಾಣೆ

**: ವಿರುದ್ದ :**

**<u>ಆರೋಪಿತರು:</u>**

ಅಯ್ಯಣ್ಣಗೌಡ ತಂದೆ ಶಾಂತಗೌಡ ಪೊಲೀಸ ಪಾಟೀಲ
ವಃ 23 ವರ್ಷ, ಉಃ ಒಕ್ಕಲುತನ,
ಸಾಃ ನೇರಡಗಿ,

**<u>ದೋಷಾರೋಪಣೆ</u>**

**ಶ್ರೀ ಕಾಶಿನಾಥ ವಿ. ಉಪ್ಪಾರ್, ಬಿ.ಎಸ್.ಸಿ. ಎಲ್ಎಲ್.ಬಿ.,** ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜೇವರ್ಗಿ, ಆದ ನಾನು, ಆರೋಪಿತರಾದ ನಿಮ್ಮ ವಿರುದ್ದ ಈ ಕೆಳಕಾಣಿಸಿದ ಅಪಾದನೆಗಳನ್ನು ರೂಪಿಸಿರುತ್ತೆನೆ.

1. ದಿನಾಂಕ 07-01-2022 ರಂದು ಮದ್ಯಾಹ್ನ 01-30 ಗಂಟೆ ಸುಮಾರಿಗೆ ಯಡ್ರಾಮಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ನೇರಡಗಿ ಗ್ರಾಮದ ಸೀಮಾಂತರದ ಹೊಲ ಸರ್ವೆ ನಂ.51 ರಲ್ಲಿ ಫಿರ್ಯಾದಿದಾರರ ಹೊಲದಲ್ಲಿ ಆರೋಪಿತನು ಅತಿಕ್ರಮವಾಗಿ ಪ್ರವೇಶ ಮಾಡಿರುತ್ತೀರಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ 447 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

2. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತನಾದ ನೀನು ಫಿರ್ಯಾದಿದಾರರಿಗೆ ಕಾನೂನು ಬಾಹಿರವಾಗಿ ಅಕ್ರಮ ತಡೆಯುಂಟು ಪಡಿಸಿರುತ್ತಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ 341 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

3. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತನಾದ ನೀನು ಫಿರ್ಯಾದಿದಾರರಿಗೆ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯ್ದು, ಸಾರ್ವಜನಿಕವಾಗಿ ಅವಮಾನ ಪಡಿಸಿರುತ್ತಿರಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ 504 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

4. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಫಿರ್ಯಾದಿದಾರರಿಗೆ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೆ, ಸಾಕ್ಷಿ ನಂ.1 ಮತ್ತು ಚಾಸಾ-4 ಅವರಿಗೆ ಕೈಯಿಂದ ಹೊಡೆದು ಗುಪ್ತಗಾಯ ಪಡಿಸಿರುತ್ತಾರೆಂದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 323 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

5. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿನಾದ ನೀನು ಫಿರ್ಯಾದಿದಾರರಿಗೆ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೆ ಆರೋಪಿತನು ಸಾಕ್ಷಿ ನಂ.1 ಅವರಿಗೆ ಚಪ್ಪಲ್ಲಿಯಿಂದ ಎಡ ಕಪಾಳಕ್ಕೆ ಹೊಡೆದು ಅವಮಾನ ಪಡಿಸಿರುತ್ತಾರೆಂದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 355 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

6. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತನಾದ ನೀನು ಫಿರ್ಯಾದಿದಾರರಿಗೆ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಮಾನಭಂಗ ಮಾಡುವ ಉದ್ದೇಶದಿಂದ ಹೊಡಿಬಡಿ ಮಾಡಿರುತ್ತಾನೆಂದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 354 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

7. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತನಾದ ನೀನು ಫಿರ್ಯಾದಿದಾರರಿಗೆ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಹೊಡಿಬಡಿ ಮಾಡಿದ್ದಲ್ಲದೆ ನಿನಗೆ ಜೀವ ಸಹಿತ ಬಿಡುವುದಿಲ್ಲ ಖಲಾಸ ಮಾಡುತ್ತೇವೆಂದು ಜೀವದ ಬೇದರಿಕೆ ಹಾಕಿರುತ್ತಿರಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ನೀವು ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

**ಆರೋಪಿಗಳ ಹೇಳಿಕೆ**

ಪ್ರಶ್ನೆ-1: ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ ಆರೋಪಣೆಯನ್ನು ಅರ್ಥಮಾಡಿಕೊಂಡಿದಿರಾ?

ಉ : ಆ-

ಪ್ರಶ್ನೆ -2 : ಆರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೆ?

ಉ : ಆ-

(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಕೊಟ್ಟಂತಹ ಹೇಳಿಕೆಗಳು ಆರೋಪಿತರ ನಿಜವಾದ ಹೇಳಿಕೆಗಳಿರುತ್ತವೆಂದು ಪ್ರಮಾಣಿಕರಿಸಲಾಗಿದೆ)

ದಿನಾಂಕ 20-03-2025

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.